# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 38 ಪ್ರಾ.ಸಾ. : 40**

| | | |
|---|---|---|
| ಸಾಕ್ಷಿಯ ಹೆಸರು | : | ಸಚಿನ್ ಇಂದಲಗಿ, |
| ತಂದೆಯ ಹೆಸರು | : | ಸುರೇಶ ಇಂದಲಗಿ, |
| ವಯಸ್ಸು | : | 34 ವರ್ಷ |
| ಕೆಲಸ | : | ಬೋಟ್ ನಡೆಸುವ ಕೆಲಸ, |
| ವಾಸ | : | ಗಣೇಶಗುಡಿ. |

**ದಿನಾಂಕಃ 17-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾನು ಸುಮಾರು 13 ವರ್ಷಗಳ ಕಾಲ ಗಣೇಶಗುಡಿಯ ಪ್ಲೈ ಕ್ಯಾಚರ್ಸ ಅ್ಯಡವೆಂಚರ್ಸನಲ್ಲಿ ಬೋಟ್ ನಡೆಸುವ ಕೆಲಸ ಮಾಡುತ್ತಾ ಬಂದಿರುತ್ತೇನೆ. ಅಲ್ಲಿಗೆ ಬರುವ ಪ್ರವಾಸಿಗರನ್ನು ಬೋಟ್‌ನಲ್ಲಿ ಕರೆದುಕೊಂಡು ಹೋಗಿ ಜಲಸಾಹಸ ಕ್ರೀಡೆಗಳನ್ನು ಮಾಡಿಸುತ್ತೇವೆ. ಸದರಿ ಗಣೇಶಗುಡಿಯ ಬಳಿ ಅಂದರೆ ಕಾಳಿ ನದಿಯಲ್ಲಿ ಯಾರಾದರೂ ಮೃತಪಟ್ಟರೆ ಅವರ ಶವಗಳನ್ನು ಹುಡುಕಿ ತೆಗೆಯುವ ಕೆಲಸವನ್ನು ಸಹಾ ಮಾಡುತ್ತಾ ಬಂದಿರುತ್ತೇನೆ. ಇಲ್ಲಿಯವರೆಗೆ ನಾನು ಸುಮಾರು 8-9 ಶವಗಳನ್ನು ನೀರಿನಲ್ಲಿ ಹುಡುಕಿ ತೆಗೆದಿರುತ್ತೇನೆ. ನನಗೆ ಚಿಕ್ಕಂದಿನಿಂದಲೂ ನೀರಿನಲ್ಲಿ ಈಜುವ ಅಭ್ಯಾಸ ಇರುತ್ತದೆ.

2. ದಿನಾಂಕಃ 26.10.2018 ರಂದು ನಾನು ಗಣೇಶಗುಡಿಯಲ್ಲಿ ಬೋಟ್ ಕೆಲಸ ಮಾಡುತ್ತಿರುವಾಗ ನಮ್ಮ ಮಾಲೀಕರು ನನಗೆ ಹಾಗೂ ನನ್ನ ಇತರೆ ಮೂರು ಜನ ಸಹದ್ಯೋಗಿಗಳಿಗೆ ಪೊಲೀಸರೊಂದಿಗೆ ಹೋಗುವಂತೆ ತಿಳಿಸಿರುತ್ತಾರೆ. ಆ ದಿನ ಪೊಲೀಸರೊಂದಿಗೆ ಎರಡು ಜನ ಇದ್ದು, ಅದರಲ್ಲಿ ಒಬ್ಬ ವ್ಯಕ್ತಿಯು ತಾನು ಕೊಲೆ ಮಾಡಲು ಬಳಸಿದ ಕತ್ತಿಗಳನ್ನು ಹಾಗೂ ಬಟ್ಟೆಗಳನ್ನು ನೀರಿನಲ್ಲಿ ಬಿಸಾಡಿದ ಸ್ಥಳ ಎಂದು ಗಣೇಶಗುಡಿಯ ಸೇತುವೆಯ ಕೆಳಗೆ ತೋರಿಸಿದ್ದು, ಅದರಂತೆ ಪೊಲೀಸರು ಪ್ರೇಮ್‌ಕುಮಾರ ಎಂಬುವರ ಕೊಲೆಯಾಗಿದ್ದು,

ಆರೋಪಿಗಳು ಕೊಲೆ ಮಾಡಲು ಬಳಸಿದ ಕತ್ತಿಗಳನ್ನು ಹಾಗೂ ಬಟ್ಟೆಗಳನ್ನು ನೀರಿನಲ್ಲಿ ಬಿಸಾಡಿದ್ದು, ಅವುಗಳನ್ನು ಹುಡುಕಿ ತೆಗೆದುಕೊಡುವಂತೆ ನಮಗೆ ಹೇಳಿರುತ್ತಾರೆ. ಆ ನಂತರ ನಾವು ಸುಮಾರು 11.30 ಘಂಟೆ ಸಮಯದಲ್ಲಿ ಒಂದು ಬೋಟ್ ಮೂಲಕ ಸೇತುವೆಯ ಕಳಗೆ ಹೋಗಿ, ಅಲ್ಲಿ ನಾವು ಮೂರು ಜನ ಬೋಟಿನಿಂದ ನೀರಿನಲ್ಲಿ ಇಳಿದು, ಕತ್ತಿಗಳು ಹಾಗೂ ಬಟ್ಟೆಗಳಿಗಾಗಿ ಹುಡುಕಾಡಿರುತ್ತೇವೆ. ನಾವು ಸುಮಾರು ಮೂರು ತಾಸುಗಳ ಕಾಲ ಸೇತುವೆಯ ಸುತ್ತಮುತ್ತ ಹುಡುಕಾಟ ಮಾಡಿರುತ್ತೇವೆ, ಆದರೆ ಆ ಸಮಯದಲ್ಲಿ ನೀರಿನ ಹರಿವಿನ ಪ್ರಮಾಣ ಹೆಚ್ಚಿದ್ದರಿಂದ, ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಆ ನಂತರ ಪೊಲೀಸರು ಸೂಪ್ಪಾ ಡ್ಯಾಮ್ ನೀರನ್ನು .ಸ್ವಲ್ಪ ಸಮಯದವರೆಗೆ ನಿಲ್ಲಿಸುವಂತೆ ಸೂಚಿಸಿದ ಮೇರೆಗೆ ಡ್ಯಾಮ್‌ನವರು ನೀರನ್ನು ಸ್ವಲ್ಪ ಕಾಲದವರೆಗೆ ಬಂದ್ ಮಾಡಿದ ಕಾರಣ, ನೀರಿನ ಹರಿವಿನ ಪ್ರಮಾಣ ಕಡಿಮೆಯಾಯಿತು, ಆ ನಂತರ ಪುನಃ ನಾವು ಕತ್ತಿ ಹಾಗೂ ಬಟ್ಟೆಗಳಿಗಾಗಿ ಹುಡುಕಾಟ ನಡೆಸಿದಾಗ, ಗಣೇಶಗುಡಿಯ ಸೇತುವೆಯ ಕೆಳಗೆ ನೀರಿನ ಆಳದಲ್ಲಿ ಒಂದು ಕತ್ತಿ ಸಿಕ್ಕಿರುತ್ತದೆ. ಆ ನಂತರ ಪೊಲೀಸರು ನಮಗೆ ಮತ್ತೆ ಹುಡುಕಾಡುವಂತೆ ಸೂಚಿಸಿದ ಮೇರೆಗೆ, ನಾವು ಪುನಃ ಅರ್ಧ ಘಂಟೆಗಳ ಕಾಲ ಹುಡುಕಾಟ ನಡೆಸಿದ್ದು, ಆದರೆ, ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ.

3. ನಮಗೆ ಸಿಕ್ಕ ಕತ್ತಿಯನ್ನು ಪೊಲೀಸರಿಗೆ ನೀಡಿರುತ್ತೇವೆ. ಅಲ್ಲಿ ಪೊಲೀಸರು ಸದರಿ ಕತ್ತಿಯನ್ನು ಜಪ್ತುಪಡಿಸಿಕೊಂಡು ಫೋಟೋ ತೆಗೆದಿರುತ್ತಾರೆ. ನಿಪಿ–5 ಫೋಟೊದಲ್ಲಿ ಸಾಕ್ಷಿಯು ತಾನು ಹಾಗೂ ತನ್ನ ಜೊತೆ ಕತ್ತಿಗಾಗಿ ಹುಡುಕಾಟ ನಡೆಸಿದ ಸಹದ್ಯೋಗಿಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–5 ಫೋಟೋದಲ್ಲಿ ತಾವು ಕತ್ತಿ ಹಿಡಿದುಕೊಂಡಿರುವುದಾಗಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಮು.ಮಾ–1 ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

4 ನಾನು ಮೂಲತಃ ದಾಂಡೇಲಿಯ ಬರ್ಚಿಯವನು. ಗಣೇಶಗುಡಿಯಿಂದ ದಾಂಡೇಲಿ ಸುಮಾರು 25 ಕಿ.ಮೀ ದೂರ ಇರುತ್ತದೆ. 2018 ರಲ್ಲಿ ನಾನು ಬರ್ಚಿಯಲ್ಲಿ ವಾಸವಾಗಿರುತ್ತೇನೆ. ಪ್ಲೈ ಕ್ಯಾಚರ್ಸ ಅ್ಯಡವೆಂಚರ್ಸನಲ್ಲಿ ಸೇರಿಕೊಳ್ಳುವ ಮೊದಲು ನಾನು ಯಾವುದೇ ತರಬೇತಿಯನ್ನು ಪಡೆದಿರುವುದಿಲ್ಲ. ಬರ್ಚಿಯಿಂದ ಗಣೇಶಗುಡಿಗೆ ಪ್ರತಿದಿನ ಓಡಾಟ ನಡೆಸುತ್ತೀರಾ ಎಂದರೆ ಸಾಕ್ಷಿಯು ನಮ್ಮ ಮಾಲೀಕರು ನಮಗೆ ಗಣೇಶಗುಡಿಯಲ್ಲಿ ಉಳಿದುಕೊಳ್ಳಲು ರೂಮ್ ಮಾಡಿಕೊಟ್ಟಿದ್ದು, ನಾವು ಅಲ್ಲಿಯೇ ಉಳಿದುಕೊಳ್ಳುತ್ತಿದ್ದೆವು ಹಾಗೂ ಆಗಾಗ್ಗೆ ಊರಿಗೆ ಹೋಗಿ ಬರುತ್ತಿದ್ದೆವು. ನಮ್ಮ ಕೆಲಸದ ಅವಧಿ ಬೆಳಿಗ್ಗೆ 9.00 ರಿಂದ ಸಂಜೆ 5.00 ಗಂಟೆಯವರೆಗೆ ಇರುತ್ತದೆ. ಆ ದಿನ ಸ್ಥಳಕ್ಕೆ ಬಂದ ಪೊಲೀಸರು ನಾವು ಪ್ಲೈ ಕ್ಯಾಚರ್ಸ ಅ್ಯಡವೆಂಚರ್ಸನಲ್ಲಿ ಕೆಲಸ ಮಾಡುವ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ಸೇತುವೆಯ ಮೇಲೆ ನಿಂತರೆ ಅಲ್ಲಿಂದ ಸೂರ್ಯ ಮುಳುಗುವ ದಿಕ್ಕಿಗೆ ಸೂಪ್ಪಾ ಡ್ಯಾಮ್ ಇರುತ್ತದೆ. ಗಣೇಶಗುಡಿ ಸೇತುವೆಯಿಂದ ನೀರು ಹರಿದು ಹೋಗುವ ದಿಕ್ಕಿನಲ್ಲಿ ಜಲಸಾಹಸ ಕ್ರೀಡೆಗಳ ಕ್ಯಾಂಪ್ ಇರುತ್ತವೆ. ನಮ್ಮ ಪ್ಲೈ ಕ್ಯಾಚರ್ಸ ಅ್ಯಡವೆಂಚರ್ಸ ಕ್ಯಾಂಪ್ ಮತ್ತು ಸೇತುವೆಯ ನಡುವೆ ದೊಡ್ಡ ದೊಡ್ಡ ಬಂಡೆಕಲ್ಲುಗಳು ಇರುತ್ತವೆ ಎಂದರೆ ಸರಿ. ಸದರಿ ಬಂಡೆಕಲ್ಲುಗಳ ನಡುವೆ ಸುಮಾರು 10 ಅಡಿಗಳ ಅಂತರ ಇದ್ದು, ಸದರಿ ಜಾಗದ ಅಂತರದಲ್ಲಿ ನೀರು ಹರಿದು ಹೋಗುತ್ತದೆ. ಸೇತುವೆ ಹಾಗೂ ಬಂಡೆಕಲ್ಲುಗಳ ನಡುವೆ ಸುಮಾರು 1 ಕಿ.ಮೀ ದೂರ ಇರುತ್ತದೆ. ಸೇತುವೆಯ ಹತ್ತಿರ ಯಾವುದೇ ವಸ್ತುಗಳನ್ನು ಎಸೆದಾಗ ಅವು ಕೆಳಗಿನ ಬಂಡೆಗಳ ಹತ್ತಿರ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

5. ಪೊಲೀಸರು ನಮ್ಮನ್ನು ಭೇಟಿ ಮಾಡಿದಾಗ ಬೆಳಿಗ್ಗೆ ಸುಮಾರು 11.00 ಘಂಟೆ ಆಗಿತ್ತು. ಆ ದಿನ ಸ್ಥಳಕ್ಕೆ ಸುಮಾರು ಐದಾರು ಜನ ಪೊಲೀಸರು ವ್ಯಾನ್‌ನಲ್ಲಿ ಬಂದಿದ್ದರು. ನಮ್ಮನ್ನು ಭೇಟಿ ಮಾಡಿದ ಪೊಲೀಸರ ವೈಯಕ್ತಿಕ ಹೆಸರುಗಳು ನಮಗೆ ಗೊತ್ತಿಲ್ಲ. ಆ ದಿನ ನಾನು ಹಾಗೂ ನನ್ನ ಜೊತೆ ನಮ್ಮ ಸಹದ್ಯೋಗಿಗಳಾದ ಕಿರಣ, ರಪೀಕ್ ಮತ್ತು ಶಬ್ಬಿರ್ ಎಂಬ ನಾಲ್ಕು ಜನ ಬೋಟ್ ನಲ್ಲಿ ಹೋಗಿ ಹುಡುಕಾಟ ನಡೆಸಿರುತ್ತೇವೆ. ಆ ದಿನ ನಾನು ಮತ್ತು ಕಿರಣ ಇಬ್ಬರೂ ಚಡ್ಡಿ (Shorts) ಧರಿಸಿದ್ದೆವು ಹಾಗೂ ಉಳಿದಿಬ್ಬರು ಏನು ಧರಿಸಿದ್ದರು ಎಂದು ನನಗೆ ನೆನಪಿಲ್ಲ. ನಾವು ಹುಡುಕಾಟ ನಡೆಸಿದ ಜಾಗದಲ್ಲಿ ಸುಮಾರು 20 ಪೂಟು ಆಳ ಇತ್ತು.

(ನ್ಯಾಯಾಲಯದ ಪೂರ್ವಾಹ್ಣದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮದ್ಯಾಹ್ಣ 2.45 ಘಂಟೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ

**ಸಾಕ್ಷಿಯನ್ನು ಪುನಃ ಮದ್ಯಾಹ್ಣ 3.00 ಘಂಟೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

6. ನಾವು ಸೇತುವೆಯಿಂದ ಕೆಳಗೆ ನೀರು ಹರಿಯುವ ಕಡೆಗೆ ಹುಡುಕಾಟ ನಡೆಸಿರುತ್ತೇವೆ. ಸೇತುವೆಯಿಂದ ಡ್ಯಾಮ್ ನ ಕಡೆಗೆ ಯಾವುದೇ ಹುಡುಕಾಟ ನಡೆಸಿರುವುದಿಲ್ಲ. ನಿಪಿ-4 ಫೋಟೋವನ್ನು ಯಾವಾಗ ತೆಗೆದರು ಎಂದು ನನಗೆ ಗೊತ್ತಿಲ್ಲ. ಮೊದಲ ಮೂರು ಗಂಟೆಗಳ ಕಾಲ ಅಂದರೆ ಮದ್ಯಾಹ್ಣ 2.30 ಗಂಟೆಯವರೆಗೆ ನಮಗೆ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಸೇತುವೆಯಿಂದ ಡ್ಯಾಮ್ ಸುಮಾರು 100 ಮೀಟರ ದೂರ ಇದೆ. ನೀರು ಕಡಿಮೆ ಆಗಲು ಸುಮಾರು 15 ರಿಂದ 20 ನಿಮಿಷ ತೆಗೆದುಕೊಂಡಿರುತ್ತದೆ. ಆ ನಂತರ ನಾವು ಪುನಃ ಹುಡುಕಾಟ ಪ್ರಾರಂಭ ಮಾಡಿರುತ್ತೇವೆ. ಗಣೇಶಗುಡಿಯ ಸೇತುವೆ ಉದ್ದ ಸುಮಾರು 80 ರಿಂದ 100 ಮೀಟರ ಉದ್ದ ಇದೆ. ನಾವು ದಾಂಡೇಲಿ ಕಡೆಯಿಂದ ಕಾರವಾರ ಕಡೆಗೆ ಬರುವ ಬದಿಯಿಂದ ನಾವು ಹುಡುಕಾಟವನ್ನು ಪ್ರಾರಂಭ ಮಾಡಿರುತ್ತೇವೆ. ಸೇತುವೆಯ ಯಾವ ಪಿಲ್ಲರನ ಕಡೆಗೆ ಸಿಕ್ಕಿತು ಎಂದು ನನಗೆ ನೆನಪಿಲ್ಲ. ನೀರು ಕಡಿಮೆ ಆದ ನಂತರ ಸುಮಾರು 25 ರಿಂದ 30 ನಿಮಿಷ ಹುಡುಕಾಟ ನಡೆಸಿದ ನಂತರ ಒಂದು ಕತ್ತಿ ಸಿಕ್ಕಿರುತ್ತದೆ. ಕತ್ತಿಯು ಸಿಕ್ಕಿದ ನಂತರ ಅದನ್ನು ನಾವು ದಡದಲ್ಲಿದ್ದ ಪೊಲೀಸರಿಗೆ ತಂದು ನೀಡಿರುತ್ತೇವೆ ಹಾಗೂ ಆ ನಂತರ ಪೊಲೀಸರು ಪುನಃ

ಹುಡುಕಾಟ ನಡೆಸಿರಿ ಎಂದು ಹೇಳಿದಾಗ, ನಾವು ಮತ್ತೆ ಹುಡುಕಾಟ ನಡೆಸಿರುತ್ತೇವೆ. ಮು.ಮಾ–1 ಕತ್ತಿಯು ಸೇತುವೆಯ ಪಿಲ್ಲರ್ ಹತ್ತಿರದಲ್ಲಿಯೇ ಸಿಕ್ಕಿರುತ್ತದೆ. ಮು.ಮಾ–1 ಕತ್ತಿಯು ಅದೇ ದಿನ ಸಿಕ್ಕ ಕತ್ತಿ ಎಂದು ಹೇಳಲು ಏನಾದರೂ ನಿಖರವಾದ ಗುರುತು ಇದೆಯಾ ಎಂದರೆ ಸಾಕ್ಷಿಯು ಕತ್ತಿಯ ಮುಂದುಗಡೆಯ ತುದಿಯು ತುಂಡಾಗಿರುತ್ತದೆ. ನಾವು ನೀರಿನಿಂದ ಕತ್ತಿಯನ್ನು ಹೊರಗೆ ತೆಗೆದಾಗ ಅದು ತುಕ್ಕು ಹಿಡಿದಿತ್ತು ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೇ ಕಬ್ಬಿಣದ ವಸ್ತುಗಳು ಸುಮಾರು 8 ದಿನಗಳ ಕಾಲ ನದಿಯಲ್ಲಿ ಬಿದ್ದಾಗ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿಯು ಕಬ್ಬಿಣದ ಮೇಲೆ ಪೆಂಟಿಂಗ್ ಮಾಡಿದರೆ ತುಕ್ಕು ಹಿಡಿಯುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–5 ಪೋಟೋದಲ್ಲಿ ಕಾಣುತ್ತಿರುವ ವ್ಯಕ್ತಿಗಳೆಲ್ಲರೂ ಕತ್ತಿಯನ್ನು ಹುಡುಕಲು ಬಂದವರಲ್ಲ ಎಂದರೆ ಸರಿ. ನಿಪಿ–5 ಪೋಟೋವನ್ನು ತೆಗೆಯುವಾಗ ನಾನು ಟಿ–ಷರ್ಟ್ ನ್ನು ಧರಿಸಿ ಪೋಟೋವನ್ನು ತೆಗೆಸಿರುತ್ತೇನೆ. ನಿಪಿ–5 ಪೋಟೋದಲ್ಲಿ ಕಾಣುತ್ತಿರುವ ಕತ್ತಿಯು ಹೊಸದರಂತೆ ಕಾಣುತ್ತದೆ ಎಂದರೆ ಸರಿ.

7. ಪೊಲೀಸರು ಕತ್ತಿ ಮತ್ತು ಇತರೆ ವಸ್ತುಗಳನ್ನು ಹುಡುಕಲು ಬಂದಿದ್ದರು ಹಾಗೂ ನಮ್ಮ ಮಾಲೀಕರು ಹೇಳಿದಂತೆ ನಾವು ಕತ್ತಿ ಹುಡುಕಲು ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕತ್ತಿಯನ್ನು ಹುಡುಕಿ ಕೊಟ್ಟ ನಂತರ ಪೊಲೀಸರು ಪಂಚನಾಮೆ ಮಾಡಿ, ಜಪ್ತುಪಡಿಸಿಕೊಂಡರು ಹಾಗೂ ಪೋಟೋ ತೆಗೆದುಕೊಂಡರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೇ ನಮ್ಮ ಕೈಯಲ್ಲಿ ಕತ್ತಿಯನ್ನು ಕೊಟ್ಟು, ಅದನ್ನು ನೀರಿನಲ್ಲಿ ಹುಡುಕಿಸಿ ತೆಗೆದಿರುತ್ತೇವೆ ಎಂದು, ಪಂಚನಾಮೆ ಮಾಡಿ, ಪೋಟೋ ತೆಗೆದುಕೊಂಡರು ಎಂದರೆ ಸರಿಯಲ್ಲ. ಸೇತುವೆಯಿಂದ ಮುಂದೆ ಇರುವ ಬಂಡೆಕಲ್ಲಿನ ಬಳಿ ಪೊಲೀಸರು ನಮಗೆ ಹುಡುಕಾಟ ಮಾಡಲು ಹೇಳಿರುವುದಿಲ್ಲ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ